ಎಂ.ವಿ.ಸಿ ನಂಬರ್ಃ 33/2025 ಪಿ ಡಬ್ಲ್ಯೂಃ 1

**ದಿಃ24.10.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ ವಕೀಲರಿಂದಃ**

ಅಪಘಾತ ಕಾಲಕ್ಕೆ ನಾನು ಕುಶಾಲನಗರ ತಾಲ್ಲೂಕು ಗಂಧದ ಕೋಟೆ ಬಳಿ ಇರುವ ಮಡಿಕೇರಿ-ಕುಶಾಲನಗರ ರಸ್ತೆ ಪಕ್ಕದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದೆ. ಅಪಘಾತ ಸಂಭವಿಸಿತು ಎನ್ನಲಾದ ಸ್ಥಳದಲ್ಲಿರುವ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ನಾನು ಅಪಘಾತ ಕಾಲಕ್ಕೆ ಕುಶಾಲನಗರದಿಂದ ಮಡಿಕೇರಿಗೆ ಬರುವ ರಸ್ತೆಯ ಎಡ ಬದಿಯಲ್ಲಿ ನಿಂತಿದ್ದೆ. ಅಪಘಾತ ಸ್ಥಳದಲ್ಲಿ ಯಾವುದೇ ಬಸ್ಸು ತಂಗುದಾಣ ಇಲ್ಲ. ಅಪಘಾತ ಸಂಭವಿಸಿದೆ ಎಂದು ಹೇಳಲಾದ ಸ್ಥಳದಲ್ಲಿ ಸಾಕಷ್ಟು ಅಂಗಡಿ ಮತ್ತು ವಾಸದ ಮನೆಗಳು ಇವೆ. ಅಪಘಾತ ಸ್ಥಳದಲ್ಲಿ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ. ಮಡಿಕೇರಿ-ಕುಶಾಲನಗರ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿರುವುದರಿಂದ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಅಪಘಾತ ಪಡಿಸಿದ ಕಾರು ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆ ಹೋಗುತ್ತಿತ್ತು. ಅಪಘಾತ ಪಡಿಸಿದ ವಾಹನ ಯಾವ ಕಡೆಯಿಂದ ಬಂತು ಎಂದು ನಾನು ಗಮನಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಅಪಘಾತ ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ಆಪಾದಿತ ವಾಹನ ನನಗೆ ಡಿಕ್ಕಿ ಹೊಡೆದಿದ್ದರಿಂದ ನಾನು ಕೆಳಗೆ ಬಿದ್ದೆ. ಈ ಅಪಘಾತ ನನ್ನ ನಿರ್ಲಕ್ಷ್ಯ ತನದಿಂದ ರಸ್ತೆ ದಾಟುತ್ತಿದ್ದಾಗ ಸಂಭವಿಸಿದೆ ಎಂದರೆ ಸರಿಯಲ್ಲ. ನಾನು ಮುಂಜಾಗ್ರತೆ ವಹಿಸದೆ ಅಜಾಗರೂಕತೆಯಿಂದ ರಸ್ತೆ ದಾಟುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಆಪಾದಿತ ಕಾರನ್ನು ಮಹಮ್ಮದ್ ನಿಶಾಲ್ ಈತ ಚಾಲನೆ ಮಾಡುತ್ತಿದ್ದ. ಅಪಘಾತ ಕಾಲಕ್ಕೆ ಆತನಿಗೆ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿ.

ಅಪಘಾತ ಸಂಭವಿಸಿದ ಕೂಡಲೇ ನಾನು ಮಡಿಕೇರಿಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸಾಕ್ಷಿ ಮುಂದುವರೆದು ಆ ನಂತರ ಮೈಸೂರಿಗೆ ಹೋಗಿ ಚಿಕಿತ್ಸೆ ಪಡೆದೆ ಎನ್ನುತ್ತಾರೆ. ನನಗೆ ಅಪಘಾತದಲ್ಲಿ ನಾನು ಹೇಳಿದಂತೆ ಯಾವುದೇ ಗಾಯ ಆಗಿಲ್ಲ

ಎಂದರೆ ಸರಿಯಲ್ಲ. ನಾನು ಮಡಿಕೇರಿ ಮತ್ತು ಮೈಸೂರಿನಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ಪೂರ್ವದಲ್ಲಿ ಗಾರೆ-ಗುತ್ತಿಗೆ ಕೆಲಸ ಮಾಡುತ್ತಿದ್ದೆ. ನಾನು ಅಪಘಾತ ಪೂರ್ವದಲ್ಲಿ ಗಾರೆ ಗುತ್ತಿಗೆ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಅಪಘಾತ ಪೂರ್ವದಲ್ಲಿ ಗಾರೆ-ಗುತ್ತಿಗೆ ಕೆಲಸ ಮಾಡಿಸುತ್ತಿರಲಿಲ್ಲ ಮತ್ತು ಅದರಿಂದ ನನಗೆ ಯಾವುದೇ ವರಮಾನ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನಗೆ 54 ವರ್ಷ ವಯಸ್ಸಾಗಿತ್ತು. ನನ್ನ ವಯಸ್ಸನ್ನು ರುಜುವಾತು ಮಾಡಲು ನಾನು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ಹೆಚ್ಚಿನ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನನಗೆ ಅಪಘಾತ ಕಾಲಕ್ಕೆ 54 ವರ್ಷಗಳಿಗಿಂತ ಮೇಲ್ಪಟ್ಟು ವಯಸ್ಸಾಗಿದ್ದು ಕಡಿಮೆ ವಯಸ್ಸನ್ನು ತೋರಿಸಿದ್ದೇನೆಂದರೆ ಸರಿಯಲ್ಲ. ಅಪಘಾತ ಸಂಬಂಧ ನಾನು ಪೋಲಿಸಿನವರಿಗೆ ದೂರು ಕೊಟ್ಟಿಲ್ಲ. ನಾನು ಮಡಿಕೇರಿಗೆ ಚಿಕಿತ್ತೆಗೆ ಬಂದಾಗ ಅಪಘಾತದಲ್ಲಿ ಗಾಯಗೊಂಡ ಬಗ್ಗೆ ವೈದ್ಯರ ಬಳಿ ಹೇಳಿದ್ದೇನೆ. ಮಡಿಕೇರಿ ಆಸ್ಪತ್ರೆಯಲ್ಲಿ ಎವ್ ಎಲ್ ಸಿ ಆಗಿದ್ದೀಯಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಮಡಿಕೇರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ. ಸಾಕ್ಷಿ ಮುಂದುವರೆದು ನನ್ನ ಪತ್ನಿ ಮಡಿಕೇರಿಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು ನಾನು ಹೋಗಿ ಬಂದು ಚಿಕಿತ್ಸೆ ಪಡೆಯುತ್ತಿದ್ದೆ ಎನ್ನುತ್ತಾರೆ. ನಾನು ಹೋಗಿ ಬಂದು ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ ಪೋಲಿಸ್ ನವರು ಅಪಘಾತ ಸಂಬಂಧ ವಿಚಾರಣೆಗೊಳಪಡಿಸಿ ಪ್ರಕರಣ ದಾಖಲಿಸಿಲ್ಲ. ನನ್ನ ಮನೆ ಗುಡ್ಡೇ ಹೊಸೂರಿನಲ್ಲಿ ಇದೆ. ಗುಡ್ಡೆ ಹೊಸೂರಿನಿಂದ ಕುಶಾಲನಗರ 4 ಕಿ.ಮೀ ದೂರದಲ್ಲಿದೆ. ಅಪಘಾತ ಸಂಬಂಧ ಕುಶಾಲನಗರ ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಿಲ್ಲ. ನನಗೆ ಯಾವುದೇ ಅಪಘಾತ ಆಗದೇ ಇದ್ದುದರಿಂದ ನಾನು ಪೋಲಿಸಿನವರಿಗೆ ದೂರು ಕೊಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಎಂ.ವಿ.ಸಿ ನಂಬರ್ಃ 33/2025 ಪಿ ಡಬ್ಲ್ಯು: 1

ಅಪಘಾತದಲ್ಲಿ ನನಗಾದ ಗಾಯಗಳು ವಾಸಿಯಾಗಿದೆ. ನಾನು ಆರೋಗ್ಯವಾಗಿದ್ದು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಬಲ್ಲೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಾದ ಗಾಯಗಳಿಂದಾಗಿ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. 3ನೇ ಎದುರುದಾರರ ಸಂಸ್ಥೆ ನನಗೆ ಪರಿಹಾರ ಕೊಡಲು ಬಾಧ್ಯಸ್ತ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.